Web site: www.cescmysore.org

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತ ಕಛೇರಿ ವಿಳಾಸ: ನಿಗಮ ಕಾರ್ಯಾಲಯ, ನಂ: 29, ವಿಜಯನಗರ 2ನೇ ಹಂತ, ಹಿನ್‌ಕಲ್, ಮೈಸೂರು-570 017

ದೂರವಾಣಿ ಸಂಖ್ಯೆ: 0821-2560803

ಮೊಬೈಲ್: 9448994743.

E-mail: aeekmp1@cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)

ಚಾ.ವಿ.ಸ.ನಿ.ನಿ., ಕುವೆಂಪುನಗರ ಉಪವಿಭಾಗ,

ಗಗನಚುಂಬಿ ಜೋಡಿರಸ್ತೆ, ಮೈಸೂರು- 570 023.

## ಸಭಾ ನಡಾವಳಿ

(78)

ದಿನಾಂಕ 09-06-2017 ರಂದು ಮಧ್ಯಾಹ್ನ 3.00 ಗಂಟೆಗೆ ಅಧೀಕ್ಷಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ., ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಕುವೆಂಪುನಗರ ಉಪವಿಭಾಗದ ಜನಸಂಪರ್ಕ ಸಭೆಯ ನಡಾವಳಿ.

ಈ ಕೆಳಕಂಡ ಅಧಿಕಾರಿಗಳು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದರು.

1. ಶ್ರೀಮತಿ ಎಂ ಸಂದೀಪ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ, ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು.
2. ಡಿ.ಕೆ. ರಂಗನಾಥ್, ಸಹಾಯಕ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ,
3. ಆರ್. ಮದನ್, ಸಹಾಯಕ ಇಂಜಿನಿಯರ್(ವಿ), ಅರವಿಂದ ಶಾಖೆ,
4. ಮುರಳಿ, ಸಹಾಯಕ ಇಂಜಿನಿಯರ್(ವಿ), ನಿವೇದಿತ ಶಾಖೆ,
5. ಹರ್ಷವರ್ಧನ್, ಕಿರಿಯ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ,
6. ಎನ್. ನಂಜುಂಡಮೂರ್ತಿ, ಪ್ರಭಾರ ಸಹಾಯಕ ಲೆಕ್ಕಾಧಿಕಾರಿ, ಕಂದಾಯ ಶಾಖೆ.

ಅಧೀಕ್ಷಕ ಇಂಜಿನಿಯರ್(ವಿ) ... ನಂ. 1857 ... 1 JUL 2017 ಮೈಸೂರು

ಮೊದಲಿಗೆ ಅಧೀಕ್ಷಕ ಇಂಜಿನಿಯರ್(ವಿ) ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುವ ಮೂಲಕ ಕೆ.ಇ.ಆರ್.ಸಿ. ನಿಯಮಾವಳಿಯ ಅನ್ವಯ ಪ್ರತಿ 3 ತಿಂಗಳಿಗೊಮ್ಮೆ ಎಲ್ಲಾ ಉಪವಿಭಾಗಗಳಲ್ಲಿ ಜನಸಂಪರ್ಕ ಸಭೆಯನ್ನು ನಡೆಸುತ್ತಿರುವುದಾಗಿ ತಿಳಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರಲ್ಲಿ ಈ ಕೆಳಕಂಡ ಗ್ರಾಹಕರು ತಮ್ಮ ಸಲಹೆಗಳು ಹಾಗೂ ಅವರ ಸಮಸ್ಯೆಗಳ ಬಗ್ಗೆ ತಿಳಿಸಿರುತ್ತಾರೆ.

1. **ಶ್ರೀ ನಾಗಭೂಷಣ ಆರಾಧ್ಯ,798, 5ನೇ ಮೇನ್, 5ನೇ ಕ್ರಾಸ್, ರಮಾಬಾಯಿನಗರ, ಮೈಸೂರು.**

ಇವರು ನಿವೇದಿತ ನಗರ, 2ನೇ ಹಂತದಲ್ಲಿನ 1)ಶ್ರೀ ಕೆ.ಎನ್. ಲೋಕೇಶ್ ರೆಡ್ಡಿ, ಮನೆ ನಂ: 11, 2) ಶ್ರೀ ಜಿ.ಎಸ್. ಚಂದ್ರಶೇಖರ್, ಮನೆ ನಂ: 36, 3) ಶ್ರೀ ಎಸ್. ಸುರೇಶ್, ಮನೆ ನಂ: 19, 4) ಶ್ರೀ ಗುರುಸಿದ್ದಪ್ಪ, ಮನೆ ನಂ: 25, 5) ಶ್ರೀ ಪಿ.ಆರ್. ಶ್ಯಾಮ್, ಮನೆ ನಂ: 38, ಈ 5 ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಪಡೆಯಲು ಅರ್ಜಿಯನ್ನು ನೋಂದಾಯಿಸಿರುವುದಾಗಿಯೂ, ಇದನ್ನು ರೆವಿನ್ಯೂ ನಿವೇಶನಗಳೆಂದು ಪರಿಗಣಿಸಿ ವಿದ್ಯುತ್ ಸಂಪರ್ಕ ನೀಡುವಂತೆ ಅರ್ಜಿ ನೀಡಿರುತ್ತಾರೆ.

ಅಧೀಕ್ಷಕ ಇಂಜಿನಿಯರ್(ವಿ): ಈ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ 30 ದಿವಸಗಳ ಒಳಗಾಗಿ ಕುವೆಂಪುನಗರದ ಉಪವಿಭಾಗಾಧಿಕಾರಿಗಳು ಇವರಿಗೆ ಪತ್ರದ ಮುಖೇನ ತಿಳಿಸುವುದಾಗಿ ತಿಳಿಸಿ, ಉಪವಿಭಾಗಾಧಿಕಾರಿಗಳಿಗೆ ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದರು.

2. **ಶ್ರೀ ಭೋಗಾನಂದೀಶ್, ವಿದ್ಯುತ್ ಗುತ್ತಿಗೆದಾರರು, ಮೈಸೂರು.**

ಇವರು ವಿದ್ಯುತ್ ಬಿಲ್ಲಿನ ಮೊತ್ತ ಹೆಚ್ಚಾಗಿದ್ದ ಸಂದರ್ಭದಲ್ಲಿ ಕಂತಿನ ರೂಪದಲ್ಲಿ ಪಾವತಿಸಲು ಅವಕಾಶ ಮಾಡಿಕೊಡುವಂತೆ ಕೋರಿದರು ಹಾಗೂ ಆರ್.ಆರ್.ಸಂಖ್ಯೆ: ಎ4051 ಸ್ಥಾವರಕ್ಕೆ ಗೃಹಬಳಕೆಯಿಂದ ವಾಣಿಜ್ಯ ಬಳಕೆಗೆ ಜಕಾತಿ ಬದಲಾವಣೆ ಕಾರ್ಯವು ಕಂದಾಯ ಶಾಖೆಯಲ್ಲಿ ವಿಳಂಬವಾಗಿರುವ ಬಗ್ಗೆ ಪ್ರಸ್ತಾಪಿಸಿದರು.

ಅಧೀಕ್ಷಕ ಇಂಜಿನಿಯರ್(ವಿ): ಈ ಬಗ್ಗೆ ಕಂದಾಯ ಶಾಖೆಯ ಅಧಿಕಾರಿಗಳಿಗೆ ಸೂಚಿಸಿ, ಮತ್ತೊಮ್ಮೆ ಈ ರೀತಿ ಗ್ರಾಹಕರಿಗೆ ಯಾವುದೇ ಕೆಲಸ ವಿಳಂಬವಾಗದ ರೀತಿಯಲ್ಲಿ ಕರ್ತವ್ಯ ನಿರ್ವಹಿಸಲು ತಮ್ಮ ಸಿಬ್ಬಂದಿಯವರಿಗೆ ತಿಳಿಸಲು ಸೂಚಿಸಿದರು ಹಾಗೂ ಅವಶ್ಯವಿರುವ ಸಂದರ್ಭದಲ್ಲಿ ಮಾತ್ರ ವಿದ್ಯುತ್ ಬಿಲ್ಲನ್ನು ಕಂತಿನ ರೂಪದಲ್ಲಿ ಪಾವತಿಸಲು ಅವಕಾಶ ಮಾಡಿಕೊಡಲಾಗುವುದೆಂದು ತಿಳಿಸಿದರು.

AEE(E) 1/7

[illegible] ರಾಮಕೃಷ್ಣನಗರ, ಮೈಸೂರು.

ಆರ್.ಆರ್.ಸಂಖ್ಯೆ: ಕೆಎನ್ಎ–21989 ಹಾಗೂ ಕೆಎನ್ಎ–21990 ಸ್ಥಾವರಗಳ ವಿದ್ಯುತ್ ಬಿಲ್ಲಿನಲ್ಲಿ ವಿಳಾಸ ತಪ್ಪಿದ್ದಿದ್ದರಿಂದ ಕುವೆಂಪುನಗರ ಉಪವಿಭಾಗದ ಕಂದಾಯ ಶಾಖೆಯಲ್ಲಿ ಸರಿಪಡಿಸಿಕೊಡಲಾಗಿದೆ. ಆದರೆ, ಮೈಸೂರು–1 ನಲ್ಲಿ ಸದರಿ ಆರ್.ಆರ್.ಸಂಖ್ಯೆಗಳ ವಿದ್ಯುತ್ ಬಿಲ್ಲನ್ನು ಪಾವತಿಸಿದಾಗ ನೀಡಿದ ರಸೀತಿಯಲ್ಲಿ ಸರಿಪಡಿಸಿರುವ ವಿಳಾಸ ಇರುವುದಿಲ್ಲ. ಆದ್ದರಿಂದ, ಇದನ್ನು ಸರಿಪಡಿಸಿಕೊಡಬೇಕಾಗಿ ತಿಳಿಸಿದರು.

ಅಧೀಕ್ಷಕ ಇಂಜಿನಿಯರ್(ವಿ): ಈ ಬಗ್ಗೆ ಇನ್ಫೋಸಿಸ್ ತಂತ್ರಾಂಶದಲ್ಲಿ ಟಿಕೆಟ್‌ರೈಸ್ ಮಾಡಿ ಸಮಸ್ಯೆಯನ್ನು ಬಗೆಹರಿಸಲು ಕಂದಾಯ ಶಾಖೆಯ ಅಧಿಕಾರಿಗಳಿಗೆ ನಿರ್ದೇಶಿಸಿದರು.

4. ಶ್ರೀ ಬಿ. ಬಸವರಾಜ್, 13ನೇ ಕ್ರಾಸ್ , ಜನತಾನಗರ, ಬೋಗಾದಿ 2ನೇ ಹಂತ, ಮೈಸೂರು,

ಇವರು 24ನೇ ವಾರ್ಡ್, ಜನತಾನಗರ 13ನೇ ಕ್ರಾಸ್ ನಲ್ಲಿ ಸುಮಾರು 160 ಅಡಿ ದೂರಕ್ಕೆ ವಿದ್ಯುತ್ ಕಂಬ ಇಲ್ಲದಂತಾಗಿ ವಿದ್ಯುತ್ ಕಂಬವನ್ನು ಅಳವಡಿಸಲು ಹಾಗೂ ಈ ವಿದ್ಯುತ್ ಕಂಬಕ್ಕೆ ಬೀದಿ ದೀಪವನ್ನು ಅಳವಡಿಸಲು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಅಧೀಕ್ಷಕ ಇಂಜಿನಿಯರ್(ವಿ): ಈ ಕುರಿತು ಸಂಬಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು ಹಾಗೂ ಬೀದಿ ದೀಪವನ್ನು ಅಳವಡಿಸುವ ಕಾರ್ಯಕ್ಕಾಗಿ ಮೈಸೂರು ಮಹಾನಗರಪಾಲಿಕೆ ಕಛೇರಿಯನ್ನು ಸಂಪರ್ಕಿಸಲು ತಿಳಿಸಿದರು.

5. ಶ್ರೀ ಬಿ.ಎಸ್. ವಿಜಯೇಂದ್ರ, ಕುವೆಂಪುನಗರ, ಮೈಸೂರು

ಇವರು ವಿದ್ಯುತ್ ಬಿಲ್ಲಿನಲ್ಲಿ ಸೋಲಾರ್ ವಾಟರ್ ಹೀಟರ್ ರಿಯಾಯಿತಿ ಹಾಗೂ ಎಲ್.ಇ.ಡಿ ಬಲ್ಬ್‌ಗಳ ಬಳಕೆ ಬಗ್ಗೆ ವಿವರಣೆಯನ್ನು ನೀಡಲು ತಿಳಿಸಿದರು.

ಅಧೀಕ್ಷಕ ಇಂಜಿನಿಯರ್(ವಿ): ಸೋಲಾರ್ ವಾಟರ್ ಹೀಟರ್ ರಿಯಾಯಿತಿ ಹಾಗೂ ಎಲ್.ಇ.ಡಿ. ಬಲ್ಬ್‌ಗಳ ಬಳಕೆಯಿಂದ ಆಗುವ ಉಪಯೋಗಗಳು ಹಾಗೂ ವಿದ್ಯುತ್ ಉಳಿತಾಯದ ಬಗ್ಗೆ ವಿವರಿಸಿದರು.

ಶ್ರೀ ಮಂಜುನಾಥ್, ವಿದ್ಯುತ್ ಗುತ್ತಿಗೆದಾರರು, ಮೈಸೂರು.

ಕುವೆಂಪುನಗರ ಉಪವಿಭಾಗದ ಆವರಣದಲ್ಲಿ ಹಾಗೂ ಎಲ್ಲಾ ಉಪವಿಭಾಗಗಳ ಆವರಣದಲ್ಲಿ ಗ್ರಾಹಕರಿಗೆ ಕುಳಿತುಕೊಳ್ಳಲು/ಬರೆಯಲು ಅನುಕೂಲಕರವಾಗುವಂತೆ ಆಸನದ ವ್ಯವಸ್ಥೆ ಮಾಡುವಂತೆ ತಿಳಿಸಿದರು ಹಾಗೂ ಕಂದಾಯಶಾಖೆಯಲ್ಲಿ ಹೆಸರಿನಲ್ಲಿ ಸ್ಪೆಲ್ಲಿಂಗ್ ಸರಿಪಡಿಸುವುದರಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು ಮತ್ತು ಕ್ಯಾಶ್ ಕೌಂಟರ್ ಬಳಿ ಸಿ.ಸಿ. ಕ್ಯಾಮರ ಅಳವಡಿಸಲು ಸಲಹೆ ನೀಡಿದರು.

ಅಧೀಕ್ಷಕ ಇಂಜಿನಿಯರ್(ವಿ): ಈ ಕುರಿತು ಉಪವಿಭಾಗಾಧಿಕಾರಿಗಳಿಗೆ ಉಪವಿಭಾಗದ ಆವರಣದಲ್ಲಿ ಕೂಡಲೇ ಗ್ರಾಹಕರಿಗೆ ಅನುಕೂಲಕರವಾಗುವಂತೆ ಆಸನದ ವ್ಯವಸ್ಥೆ ಮಾಡುವಂತೆ ಹಾಗೂ ಕಂದಾಯ ಶಾಖೆಯ ಅಧಿಕಾರಿಗಳಿಗೆ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದರು.

7. ಶ್ರೀ ಅಶ್ವಥನಾರಾಯಣ, ವಿದ್ಯುತ್ ಗುತ್ತಿಗೆದಾರರು, ಮೈಸೂರು.

ಹೊಸದಾಗಿ 20 X 30 ಗಿಂತ ಮೇಲ್ಪಟ್ಟ ಅಳತೆಯ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆಯುವಾಗಲೇ ಸೋಲಾರ್ ಹಾಕಿಸಿರುವ ಬಗ್ಗೆ ದಾಖಲೆಗಳನ್ನು ನೀಡುತ್ತಿದ್ದು, ಅದರನ್ವಯ ಸೋಲಾರ್ ರಿಯಾಯಿತಿಯನ್ನು ನೀಡುವಂತೆ ತಿಳಿಸಿದರು ಹಾಗೂ ನಿಗಮದ ಸುತ್ತೋಲೆಗಳು, ಆದೇಶಗಳು ಇವುಗಳನ್ನು ಉಪವಿಭಾಗದ ಸೂಚನಾ ಫಲಕಗಳಲ್ಲಿ ಹಾಕಲು ತಿಳಿಸಿದರು. ವಿದ್ಯುತ್ ಸಂಪರ್ಕವನ್ನು ಪಡೆಯಲು ಹಣವನ್ನು ಪಾವತಿಸಲು ನೀಡುವ ಇಂಟಿಮೇಶನ್‌ನಲ್ಲಿ ಪಾವತಿಸುವ ಅವಧಿ 30 ದಿವಸಗಳೆಂದು ಸೂಚಿಸಲಾಗಿದೆ. ಆದರೆ, ಕೆ.ಇ.ಆರ್.ಸಿ. ನಿಯಮದನ್ವಯ ಅವಧಿ 90 ದಿವಸಗಳಾಗಿರುತ್ತದೆ. ಇಂಟಿಮೇಶನ್‌ನಲ್ಲಿ ಇದನ್ನು ಸರಿಪಡಿಸಲು ಸೂಚಿಸಿದರು.

ಅಧೀಕ್ಷಕ ಇಂಜಿನಿಯರ್(ವಿ): ಈ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ಇನ್ಫೋಸಿಸ್ ತಂತ್ರಾಂಶದಲ್ಲಿ ಟಿಕೆಟ್‌ರೈಸ್ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದರು.

8. ಶ್ರೀ ಮಂಜುನಾಥ್, ವಿದ್ಯುತ್ ಗುತ್ತಿಗೆದಾರರು, ಮೈಸೂರು.

ಹೊಸ ಸ್ಥಾವರಗಳಿಗೆ ಹೆಚ್.ಪಿ.ಎಲ್ ಮಾಪಕಗಳನ್ನು ಅಳವಡಿಸುವಾಗ ಮೇನ್ ವೈರ್ ಸಡಿಲಗೊಂಡಿದ್ದು, ಮಾಪಕ ಸುಡುವ ಸಾಧ್ಯತೆ ಇರುವುದಾಗಿ ತಿಳಿಸಿದರು.

ಅಧೀಕ್ಷಕ ಇಂಜಿನಿಯರ್(ವಿ): ಉಪವಿಭಾಗಾಧಿಕಾರಿಗಳಿಗೆ ಈ ಬಗ್ಗೆ ಶಾಖಾಧಿಕಾರಿಗಳಿಗೆ ತಮ್ಮ ಸಿಬ್ಬಂದಿಗಳಿಗೆ ನಿರ್ದೇಶನ ನೀಡಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ನಿರ್ದೇಶಿಸಿದರು.

... ವ್ಯಾಪ್ತಿಯಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆ ಇದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ ರವರಿಗೆ ದೂರವಾಣಿ ಮೂಲಕ ಅಥವಾ ಕಛೇರಿಗೆ ಬಂದು ತಿಳಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು

ಸಂಖ್ಯೆ: ಸಕಾನಿಇಂ(ವಿ), ಸ.ಇಂ(ತಾಂ)/ಕುನ/ಉವಿ/911-17

ದಿನಾಂಕ: 27/6/17

ಪ್ರತಿಯನ್ನು,

1. ಅಧೀಕ್ಷಕ ಇಂಜಿನಿಯರ್(ವಿ), ಕಾ.ಮತ್ತು ಪಾ.ವೃತ್ತ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು, ಸರಸ್ವತಿಪುರಂ ಶಾಖೆ, ಅರವಿಂದ ಶಾಖೆ, ನಿವೇದಿತ ಶಾಖೆ, ಕಂದಾಯ ಶಾಖೆ, ತಾಂತ್ರಿಕ ಶಾಖೆ, ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು ರವರಿಗೆ.

ಪ್ರ.ಕ.